CLAUSES 2 *to* 4.

Mr. DEPUTY SPEAKER.—The question is:

"That Clauses 2 to 4 both inclusive, do stand part of the Bill."

The motion was adopted.

Clauses 2 to 4, both inclusive, were added to the Bill.

CLAUSE 1, ETC.

Mr. DEPUTY SPEAKER.—The question is

"That Clause 1, the long Title, the preamble and the Enacting Formula do stand part of the Bill."

The motion was adopted.

Clause 1, the long Title, the preamble and the Enacting Formula were added to the Bill.

Motion to pass.

Sri H. SIDDAVEERAPPA.—Mr. Speaker, I move:

"That the Mysore Homoeopathic Practitioners (Amendment) Bill, 1972, be passed."

Mr. DEPUTY SPEAKER.—The suestion is:

"That the Mysore Homoeopathic Practitioners (Amendment) Bill, 1972, be passed."

The motion was adopted and the Bill was passed.

3.30 P.M.

MYSORE AYURVEDIC AND UNANI PRACTITIONERS REGISTRATION AND MEDICAL PRACTITIONERS' MISCELLANEOUS (AMENDMENT) BILL, 1972.

Sri H. SIDDAVEERAPPA (Minister for Health).—Sir, I move:

"That the Mysore Ayurvedic and Unani Practitioners Registration and Medical Practitioners' Miscellaneous (Amendment) Bill, 1972, be taken into consideration."

Mr. DEPUTY SPEAKER.—Motion moved:

"That the Mysore Ayurvedic and Unani Practitioners Registration and Medical Practitioners' Miscellaneous (Amendment) Bill, 1972, be taken into consideration."

ಶ್ರೀ ಎಚ್. ಸಿದ್ದವೀರಪ್ಪ.—ಈ ಮನೂದೆಯ ತತ್ವ ಕೂಡ ಹಿಂದೆ ಹೇಳಿದ ಮನೂದೆಯಲ್ಲಿ ನಮೂದಿಸಿದಂತೆ ಚುನಾವಣೆಗೆ ಸಂಬಂಧಪಟ್ಟ ವಿಷಯ ಇರದಿಲ್ಲ ಇದೆ. ಈಗ ಇರತಕ್ಕ ಮನೂದೆಯ ಪ್ರಕಾರ ರಾಜ್ಯದ ಎಲ್ಲಾ ಮೂಲೆ ಮೂಲೆಗಳಲ್ಲಿರತಕ್ಕ ಆಯುರ್ವೇದ ಮತ್ತು ಯೂನಾನಿ ಡಾಕ್ಟರು ಗಳು 6723 ಜನ ಏನು ಇವ್ವಾರೆ ಅವರೆಲ್ಲರೂ ಬೆಂಗಳೂರಿಗೆ ಬಂದು ಓಟು ಕೊಡಬೇಕಾಗಿದೆ. ಆರೀತಿ ಮಾಡುವುದರಿಂದ ಅವರಿಗೆ ತೊಂದರೆಯಾಗುತ್ತದೆ ಅವರು ಯಾರೂ ಬಂದು ಓಟು ಮಾಡುವುದಿಲ್ಲ. ಆದ್ದರಿಂದ ಶ್ರೀಮಾನ್ ಶಾಮಣ್ಣನವರು ಹೇಳಿದಹಾಗೆ ಬೆಂಗಳೂರಿನಲ್ಲಿರತಕ್ಕ ಡಾಕ್ಟರುಗಳಿದೇ ಮನಾಪಾಲಿಯಾಗುತ್ತದೆ. ಆದ್ದರಿಂದ ಪೋಸ್ಟಲ್ ಬ್ಯಾಲೆಟ್‌ನಲ್ಲಿ ವೋಟು ಮಾಡುವಂತಹ ಒಂದು ಪದ್ಧತಿಯನ್ನು ಮಾಡಿದರೆ ಆಗ ಎಲ್ಲರೂ ವೋಟು ಮಾಡಿ ತಮಗೆ ಬೇಕಾದ ಪ್ರತಿನಿಧಿಯನ್ನು ಆರಿಸಿ ಕಳುಹಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಒಂದು ತಿದ್ದುಪಡಿ ಮನೂದೆಯನ್ನು ಈ ಸಭೆಯ ಮುಂದೆ ತಂದಿದ್ದೇವೆ. ಈ ತಿದ್ದುಪಡಿ ಮನೂವೆಗೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆ ಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ ಮಾನ್ಯ ಆರೋಗ್ಯ ಮಂತ್ರಿಗಳು ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ಆಯುರ್ವೇದ ಮತ್ತು ಯೂನಾನಿ ಪ್ರಾಕ್ಟಿಷನರುಗಳ ವೋಟಿಂಗಿಗೆ ಸಂಬಂಧಪಟ್ಟ ತಿದ್ದುಪಡಿ ಮನೂದೆಯಮೇರೆ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಆರೋಗ್ಯ ಶಾಖೆಯ ಮಂತ್ರಿಗಳಾದಮೇಲೆ ಆಯುರ್ವೇದ, ಯೂನಾನಿ ಮತ್ತು ಹೋಮಿಯೋಪತಿಕ್ ಇವುಗಳಿಗೆ ನ್ಯಾಯ ಆಸಕ್ತಿ ವಹಿಸಿದಹಾಗೆ ಕಾಣುತ್ತದೆ. ಈ ಆಯುರ್ವೇದ, ಯೂನಾನಿ ಮತ್ತು ಹೋಮಿಯೋಪತಿಕ್ ಇವು ಇಂಡಿಯನ್ ಮೆಡಿಸನ್‌ಗೆ ಸಂಬಂಧಪಟ್ಟವುಗಳು. ಇದರ ಬಗ್ಗೆ ಸಾಕಷ್ಟು ಶ್ರದ್ಧೆ ವಹಿಸಿ ಅವುಗಳ ಬೆಳವಣಿಗೆ ಯನ್ನು ಮಾಡಬೇಕಾದ್ದು ಅವಶ್ಯಕ. ಸಾಧಾರಣವಾಗಿ ರೋಗಗಳ ನಿವಾರಣೆಗೆ ದಿನೇ ದಿನೇ ಖರ್ಚು ಜಾಸ್ತಿಯಾಗುತ್ತಿದೆ. ಅಲೋಪತಿಗಿಂತ ಆಯುರ್ವೇದ, ಯೂನಾನಿ ಮತ್ತು ಹೋಮಿಯೋ ಪತಿಕ್‌ಗಳಾದ ನ್ಯಾಚುರಲ್ ಔಷಧಿಗಳಿಂದ ರೋಗವನ್ನು ಕ್ಯೂರ್ ಮಾಡುವುದು ಖರ್ಚು ಕಡಿಮೆ ಯಾಗುತ್ತದೆ, ಮತ್ತು ಬೇಗ ಕಾಯಿಲೆಯೂ ವಾಸಿಯಾಗುತ್ತದೆ. ಆದ್ದರಿಂದ ನಾನು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೇ. ಇದರ ಬಗ್ಗೆ ನಣ್ಣ ಬಿಲ್ಲನ್ನು ತರುವುದರ ಬದಲು ಇದರ ಉಪಯೋಗವನ್ನು ಸಾಕಷ್ಟು ಜನಗಳು ಉಪಯೋಗಿಸಿಕೊಂಡು ಹೆಚ್ಚಿನ ರೀತಿಯಲ್ಲಿ ಪ್ರಯೋಜನವಾಗುವ ರೀತಿಯಲ್ಲಿ ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಸಮಗ್ರ ಬಿಲ್ಲನ್ನು ಈ ಸಭೆಯ ಮುಂದೆ ತರಬೇಕು. ಇದುಹೆಚ್ಚು ರೀತಿಯಲ್ಲಿ ಪ್ರಯೋಜನವಾಗುವಂತೆ ಕ್ರಮತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಗಳು ಅದರ ಬಗ್ಗೆ ಸಾಕಷ್ಟು ಆಸಕ್ತಿಯನ್ನು ವಹಿಸಿ ಇದರ ಬಗ್ಗೆ ಏನೇನು ಕಾಯಕ್ರಮ ವನ್ನು ತೆಗೆದುಕೊಳ್ಳಬೇಕೋ ಅದನ್ನು ಜಾಗ್ರತೆ ತೆಗೆದುಕೊಳ್ಳಬೇಕೆಂದು ಹೇಳಿ ಇದಕ್ಕೆ. ನನ್ನ ಒಪ್ಪಿಗೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಆರೋಗ್ಯ ಶಾಖೆಯ ಮಂತ್ರಿಗಳು ಈ ಸಭೆಯಮುಂದೆ ತಂದಂತಹ ಹೋಮಿಯೋಪತಿಕ್ ಮತ್ತು ಯುನಾನಿ ಹಾಗು ಆಯುರ್ವೇದ ಮನೂದೆಗಳು ಏನಿವೆ ಅವು ಕೇವಲ ಚುನಾವಣೆಗೆ ಸಂಬಂಧಪಟ್ಟ ಹಾಗೆ ಇದ್ದಂತೆ ತೋರುತ್ತದೆ. ಇದರಲ್ಲಿ ಯಾವ ಮಹತ್ತರವಾದ ಒಂದು ತತ್ವ, ವಿಚಾರ ಕೂಡ ಇಲ್ಲ ಎಂದು ನಾನು ಹೇಳುತ್ತೇನೆ ಎಂದು ಮಾನ್ಯ ಆರೋಗ್ಯ ಸಚಿವರು ಅಶ್ವಾಸನೆ ಕೊಡಿಸುತ್ತಿದ್ದರು. ಈ ಮನೂದೆ ಚುನಾವಣೆಗೆ ಸಂಬಂಧಪಟ್ಟದ್ದಾದ್ದರೂ ಈ ಇರಾಖೆಯ ವಿಚಾರದಲ್ಲಿ ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಗಮನ ಕೊಡಬೇಕು ಎನ್ನುವ ತತ್ವವನ್ನು ನಾನು ಒಪ್ಪುತ್ತೇನೆ ಎಂದೂ ನಹಾ ಅವರು ಒಪ್ಪಿಕೊಂಡಿದ್ದಾರೆ. ಇತ್ತೀಚೆಗೆ ನಮ್ಮ ಆರೋಗ್ಯ ಸಚಿವರು ಬಂದಮೇಲೆ ಎಷ್ಟೋ ದಿವಸಗಳಿಂದ ಆಗದೇ ಇದ್ದಂತಹ ಆಯುರ್ವೇದ ಮತ್ತು ಯೂನಾನಿ ಭಾಗದಲ್ಲಿ ಹೆಚ್ಚಿನ ಬದಲಾವಣೆ ಮಾಡಬೇಕು ಎನ್ನುವಂತಹ ಒಂದು ಉತ್ಸಾಹವನ್ನು ಹೊಂದಿದ್ದಾರೆ. ಹೊರದೇಶಗಳ ಔಷಧಿಗಳನ್ನು ಅನಾವಶ್ಯಕ ವಾಗಿ ಉಪಯೋಗಿಸಿ ಸಾಮಾನ್ಯ ಜನಗಳಿಗೆ ತೊಂದರೆ ಆಗುವುದು ತಪ್ಪಬೇಕೆಂದು ಅವರು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಸಂತೋಷಪಡುತ್ತೇನೆ. ಆಯುರ್ವೇದದ ವಿಷಯದಲ್ಲಿ ಡಾಕ್ಟರ್ ಮಾಣಿಕ್ಯಂ ಅವರು ಕೆಲವು ದಿವಸಗಳ ಹಿಂದೆ ಒಂದು ಯೋಜನೆಯನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದರು. ಆದರೆ ಈ ಬಗ್ಗೆ ಸರ್ಕಾರದವರು ಸಾಕಷ್ಟು ನಿಗಾ ಕೊಟ್ಟಿಲ್ಲ. ಆದರೆ ಈಗ ಸರ್ಕಾರದವರು ಆಯುರ್ವೇದದ ವಿಷಯದಲ್ಲಿ ಒಂದು ರೀತಿಯಲ್ಲಿ ಹೆಚ್ಚಿನ ನಿಗಾ ಕೊಡುತ್ತಿದ್ದಾರೆ. ಆಯುರ್ವೇದ ಮತ್ತು ಅಲೊಪತಿಕ್ ಔಷಧಿಗಳ ಸಂಬಂಧದಲ್ಲಿ ದೇಶದಲ್ಲಿ ಒಂದು ಹೋರಾಟ ಇದೆ. ಆ ರೀತಿ ಹೋರಾಟ ಇರುವುದು ಪ್ರೊಫೆಷನರ್ ಜಲಸಿಯಿಂದ. ಮೊದಲನಿಂದಲೂ ಆಯುರ್ವೇದಕ್ಕೆ ಅಲೋಪತಿಕ್ ಔಷಧಿಯಂತೆ ಈಕ್ವಲ್ ಟ್ರೀಟ್‌ಮೆಂಟ್ ಬಂದಿಲ್ಲ. ಮತ್ತು ಈ ಆಯುರ್ವೇದಕ್ಕೆ

(ಶ್ರೀ ಕೆ. ಪ್ರಭಾಕರ್)

ಸಂಬಂಧಪಟ್ಟ ಬಳ್ಳಿಗಳು, ಗಿಡಗಳು, ಮೂಲಿಕೆಗಳು ಇವುಗಳನ್ನು ಬೆಳೆಸುವುದರ ಕಡೆ ಸರ್ಕಾರದ ವರು ಸಾಕಷ್ಟು ನಿಗಾ ಕೊಟ್ಟಿಲ್ಲ. ಈ ಆಯುರ್ವೇದಿಕ್ ಔಷಧಿಯನ್ನು ಯಾರೋ ಫಾರ್ಮಸಿಯವರು ತಯಾರು ಮಾಡುತ್ತಾರೆ. ನಮ್ಮಲ್ಲಿ ಈ ಆಯುರ್ವೇದ ಔಷಧಿ ತಯಾರಿಕೆಗೆ ಸಂಬಂಧಪಟ್ಟ ಹಾಗೆ ಧೂತಪಾಪೇಶ್ವರ ಎನ್ನುವ ಒಂದು ಕಂಪೆನಿ ಇದೆ. ಇದರಲ್ಲಿ 16 ಜನ ಸೇರಿಕೊಂಡು ಹೊರದೇಶದ ವರೊಡನೆ ಒಂದು ಅಗ್ರಿಮೆಂಟ್ ಮಾಡಿಕೊಂಡು, ಕೊರಾಬೊರೇಷನ್ ಮಾಡಿಕೊಂಡು ಔಷಧಿಯನ್ನು ತಯಾರಿಸಿ ಸಂಗ್ರಹ ಮಾಡಿ ಇಟ್ಟುಕೊಂಡಿರುತ್ತಾರೆ. ಅವರು ಈ ಔಷಧಿಯನ್ನು ತಯಾರು ಮಾಡುವುದಕ್ಕೆ ಬೇಕಾದ ಚಕ್ಕೆ ಮುಂತಾದ ರಾ ಮೆಟೀರಿಯಲ್ ಭಾರತದಲ್ಲಿ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಅದು ಸಿಕ್ಕುತ್ತದೆ ಎಂದು ತೋರಿಸಿ ಚಾರೆಂಜ್ ಮಾಡತಕ್ಕವರು ನಮ್ಮಲ್ಲಿ ಇಲ್ಲ. ಆಯುರ್ವೇದಕ್ಕೆ ಸಂಬಂಧಪಟ್ಟ 36 ಔಷಧಿಗಳು ನಮ್ಮ ಭಾರತದಲ್ಲಿ ತಯಾರಾಗುವುದಿಲ್ಲ ಎನ್ನುವ ಭಾವನೆ ಇದೆ. ಇದರಿಂದಾಗಿ ಆಯುರ್ವೇದ ಕುಂಠಿತವಾಗುತ್ತಿದೆ. ಇದನ್ನು ಸರ್ಕಾರದವರು ನಿರಿಮಾಡಬೇಕು.

ಇನ್ನು ಚುನಾವಣೆಗೆ ಸಂಬಂಧಪಟ್ಟಹಾಗೆ ಏನೇನು ಬದಲಾವಣೆಗಳನ್ನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದರು ಪೋಟಿನಬ್ಯಾಲೆಟ್ ಬಾಕ್ಸನ್ನು ಎಲ್ಲರಿಂದಲೂ ಕಲೆಕ್ಟ್ ಮಾಡಿಕೊಂಡು ಬರುವುದು ಸಾಧುವಲ್ಲ ಎಂದರು. ಅದು ಎಲ್ಲರೂ ಒಪ್ಪತಕ್ಕ ಮಾತು. ಪೋಸ್ಟಲ್ ಬ್ಯಾಲೆಟ್ ವೋಟು ಕಳುಹಿಸುವಂತಹ ಒಂದು ಪದ್ಧತಿಯನ್ನು ಜಾರಿಗೆ ತರುವುದು ಒಳ್ಳೆಯದು. ಆದರೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹೊರಡಿಸುವಾಗ ವೋಟನ್ನು ಇಂಥಾ ದಿವಸ ಎಣಿಕೆ ಮಾಡಬೇಕೆಂದು ಅವರಲ್ಲಿ ತಿಳಿಸಬೇಕು. ಅದು ಎಲೆಕ್ಷನ್ ರೂಲ್ಸಿಗೂ ವಿರೋಧವಿಲ್ಲ. ಆದರೆ ವೋಟಿಂಗಿನ ದಿವಸ ಬ್ಯಾಲೆಟ್ ವೋಟನ್ನು ಪೋಸ್ಟಿಗೆ ಹಾಕಿರಬೇಕು. ಪೋಸ್ಟರ್ ಸೀರ್ ಕಾಣಿಸಬೇಕು. ವೋಟಿಂಗಿನ ದಿವಸ ಬ್ಯಾಲೆಟ್ ವೋಟನ್ನು ಪೋಸ್ಟಿಗೆ ಹಾಕದಿದ್ದರೆ ಅಂಥಾ ದ್ದನ್ನು ವ್ಯಾಲ್ಯೂ ಮಾಡುವುದಿಲ್ಲ ಎಂದು ಈ ಮನೂಡೆಯಲ್ಲಿ ನಮೂದಿಸಬೇಕು. ಅಡ್ವಾನ್ಸ್ ಆಗಿ ಬ್ಯಾಲೆಟ್ ವೋಟನ್ನು ಪೋಸ್ಟಿನಲ್ಲಿ ಕಳುಹಿಸಿದರೆ ಅಥವಾ ವೋಟಿಂಗ್ ಆದ ಮೂರು ದಿವಸಗಳ ಮೇಲೆ ಬ್ಯಾಲೆಟ್ ವೋಟನ್ನು ಪೋಸ್ಟಿನಲ್ಲಿ ಕಳುಹಿಸಿದರೆ ಅಂಥಾದ್ದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂಬುವನ್ನು ರೂಲ್ಸಿನಲ್ಲಿ ಅಳವಡಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನ್ಯಾಮಿ, ಶ್ರೀಮಾನ್ ಶಾಮಣ್ಣನವರು ಮಾತನಾಡುತ್ತಾ ಆಯುರ್ವೇದದ ಬಗ್ಗೆ ನಮ್ಮ ಇಂಡಿಯನ್ ಸಿನ್ಸಮ್ ಆಫ್ ಮೇಡಿಸನ್‌ಗೆ ಪ್ರೋತ್ಸಾಹ ಕೊಡ ಬೇಕೆಂದು ಬಹಳ ಉತ್ಸಾಹ ತೋರಿಸಿದರು. ಸರ್ಕಾರದ ಉದ್ದೇಶವಾದರೂ ಸಹ ಅದೇ ಆಗಿದೆ. ಅದಕ್ಕೋಸ್ಕರವೆ ರಿಜಿಸ್ಟ್ರರ್ ಆಫ್ ಇಂಡಿಯನ್ ಮೇಡಿಸನ್ ಎಂದು ಸಪರೇಟ್ ಡ್ರೈರಕ್ಟರೇಟ್‌ನ್ನು ಫಾರಮ್ ಮಾಡಿದ್ದೇವೆ. ಮತ್ತು ತಮಗೆರ್ಾ ಗೊತ್ತಿರುವಂತೆ ಡಾಕ್ಟರ್ ಮೇರೋಟೆಯವರ ನೇತೃತ್ವ ದಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ಸಹ ನೇಮಕ ಮಾಡಿದ್ದೇವೆ. ಅವರ ವರದಿ ಬರುವುದರಲ್ಲಿ ಇದೆ. ಅವರ ವರದಿ ಬಂದ ಮೇಲೆ, ಅದನ್ನು ಮೂಲಭಾಗಿ ಇಟ್ಟುಕೊಂಡು ಯಾವ ರೀತಿ ನರಿ ಮಾಡಬೇಕೆಂಬುದನ್ನು ಯೋಚನೆ ಮಾಡುತ್ತೇವೆ. ನಮ್ಮ ಸ್ನೇಹಿತರಾದ ಶ್ರೀಮಾನ್ ಪ್ರಭಾಕರ್ ಅವರು ನಾವರ್ ಸಜೆಷನ್ ಕೊಟ್ಟರು. ಪೋಸ್ಟ್ ಮೂಲಕ ಮತದಾನ ಮಾಡು ವವರು ಮತದಾನದ ದಿನವೇ ಪೋಸ್ಟ್ ಮಾಡಬೇಕು ಎಂದು ಅವರು ಹೇಳಿದರು. ಅವರು ಹೇಳು ವುದನ್ನು ಸಹ ಗಮನಿಸುತ್ತೇವೆ. ಮುಖ್ಯವಾಗಿ ಎಲ್ಲರಿಗೂ ಮತದಾನ ಮಾಡುವ ಅವಕಾಶ ದೊರೆಯಬೇಕು, ಇಲ್ಲದಿದ್ದರೆ ಬಹಳಷ್ಟು ಜನ ಮತದಾನ ಮಾಡುವುದಿಲ್ಲವೆಂಬ ಕಾರಣದಿಂದ ಈ ಮನೂಡೆಯನ್ನು ತರಲಾಗಿದೆ. ಇದೇ ಒಂದು ಕಾರಣದಿಂದ ಅನೇಕ ವರ್ಷಗಳ ಕಾಲ ಬೋರ್ಡ್ ಕೂಡ ರಚನೆಯಾಗಿರಲಿಲ್ಲ. ಇದನ್ನೆಲ್ಲಾ ನರಿಪಡಿಸಲು ಈ ಮನೂಡೆಯನ್ನು ತರಲಾಗಿದೆ. ಈ ಮಸೂನೆಯನ್ನು ಮಾನ್ಯ ಸದಸ್ಯರೆಲ್ಲರೂ ಸ್ವಾಗತಿಸಿದ್ದಕ್ಕೆ ವಂದಿಸಿ, ಇದನ್ನು ಪಾಸ್ ಮಾಡಲು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—The question is :

"That the Mysore Ayurvedic and Unani Practitioners' Registration and Medical Practitioners' Miscellaneous Provisions (Amendment) Bill, 1972 be taken into consideration."

The motion was adopted.

Consideration of clauses.

CLAUSES 2 AND 3

Mr. DEPUTY SPEAKER.—The question is :

"That Clauses 2 and 3 do stand part of the Bill."

The motion was adopted.

Clauses 2 and 3 were added to the Bill.

CLAUSE 1, ETC.

Mr. DEPUTY SPEAKER.—The question is :

"That Clause 1, the Long Title, the Preamble and the Enacting Formula do stand part of the Bill."

The motion was adopted.

Clause 1, the Long Title, the Preamble and the Enacting Formula were added to the Bill.

MOTION TO PASS

Sri H. SIDDAVEERAPPA.—I beg to move :

"That the Mysore Ayurvedic and Unani Practitioners' Registration and Medical Practitioners' Miscellaneous Provisions (Amendment) Bill, 1972 be passed."

Mr. DEPUTY SPEAKER.—The question is :

"That the Mysore Ayurvedic and Unani Practitioners' Registration and Medical Practitioners' Miscellaneous Provisions (Amendment) Bill, 1972 be passed "

The motion was adopted and the Bill was passed.

MYSORE TENANTS (RELIEF IN PAYMENT OF ARREARS OF RENT) BILL, 1972.

Motion to Consider

Sri N. HUTCHAMASTHY GOWDA (Minister for Revenue).—Sir, I beg to move :

"That the Mysore Tenants (Relief in Payment of Arrears of Rent) Bill, 1972 be taken into consideration."

Mr. DEPUTY SPEAKER.—Motion moved :

"That the Mysore Tenants (Relief in Payment of Arrears of Rent) Bill, 1972 be taken into consideration.